*ಓ:ಎಸ್:ನಂ.310/2015*

***ಡಿ .ಡಬ್ಲ್ಯೂ- 1***

***<u>ದಿಃ 14-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಆರ್ ಎಸ್ ವಕೀಲರಿಂದ</u>***

ಈ ದಾವೆಯ ವಾದಿ ಗೌರಮ್ಮ ನನಗೆ ಗೊತ್ತಿಲ್ಲ. ನನ್ನ ತವರು ಮನೆ ನಂದೀಪುರ. ನಮ್ಮ ತಂದೆ ಹೆಸರು ಬೈರಪ್ಪ. ನನ್ನ ಗಂಡನ ಮನೆ ತರೀಕೆರೆಯಲ್ಲಿದೆ. ದಾವ ಆಸ್ತಿಯಲ್ಲಿ *1* ಎಕರೆ *3* ಗುಂಟೆಯನ್ನು ನಮ್ಮ ತಂದೆಯವರು ಕಲ್ಲಪ್ಪನವರಿಂದ ಕ್ರಯಕ್ಕೆ ಪಡೆದಿರುತ್ತಾರೆ. *1*ನೇ ಪ್ರತಿವಾದಿಯಿಂದ ನಮ್ಮ ತಂದೆಯವರು ಮೇಲ್ಕಂಡ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿ ತಂದೆ ಹೆಸರು ನಾಗಪ್ಪ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಕ್ರಯಕ್ಕೆ ಪಡೆದಿರುವ ಆಸ್ತಿಯು ವಾದಿಯರ ಕುಟುಂಬಕ್ಕೆ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ಮತ್ತು ಲಕ್ಷ್ಮಮ್ಮನವರ ಕುಟುಂಬದಲ್ಲಿ ಆದ ಆಸ್ತಿ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ಅಜ್ಜಿಗೆ ಯಾವುದೇ ರೀತಿ ಮಾರಾಟ ಮಾಡಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಲಕ್ಷ್ಮಮ್ಮನಿಗೆ ದಾವ ಆಸ್ತಿಯನ್ನು ಮಾರಾಟ ಮಾಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***